**International Journal of Academic Research**
P-ISSN: 2348-7666: Impact Factor: 6.023
Homepage: https://www.ijar.org.in/
Volume-12, Issue-1, Jan-Mar-2025
This work is licensed under a Creative Commons Attribution 4.0 International License [CC BY 4.0]

**Research Article**

# ಕಂಗುಂದಿ ಕುಪ್ಪಂ ನಾಟಕಗಳು : ಮಹಾಭಾರತ ಕಥೆ

**Dr. MUNIRAJA A.**
Asst. Professor, Dept. of Languages-Kannada, Madras Christian College, Tambaram, Chennai

**ಪೀಠಿಕೆ**

ಮನುಷ್ಯನ ಮನೋರಂಜನೆಯ ಪ್ರಾಚೀನ ಪ್ರಕಾರಗಳಲ್ಲಿ ನಾಟಕವೂ ಒಂದು. ಬೀದಿ ನಾಟಕಗಳೆಂದು ಕರೆಯಲ್ಪಡುವ ಇಂದಿಗೂ ಪ್ರಚಾರದಲ್ಲಿರುವ ನಾಟಕದ ವಿಧವು ಅತ್ಯಂತ ಪುರಾತನವಾದದ್ದೆನಿಸುತ್ತದೆ. ಇಂತಹ ಬೀದಿನಾಟಕಗಳು ತದನಂತರದಲ್ಲಿ ಒಂದು ವೇದಿಕೆಯ ಮೇಲೆ ಅಭಿನಯಿಸುವ ದರ್ಜೆಗೆ ಏರಿದಂತೆ ಕಾಣುತ್ತದೆ. ದ್ರಾವಿಡ ಭಾಷಾ ಗುಂಪಿಗೆ ಸೇರಿದ ಹಾಗೂ ಭೌಗೋಳಿಕವಾಗಿಯೂ ಅಕ್ಕಪಕ್ಕದಲ್ಲಿರುವ ಕನ್ನಡ ಮತ್ತು ತೆಲುಗು ನೆಲಗಳಲ್ಲಿ ನಾಟಕ ಸಾಹಿತ್ಯವು ಅತ್ಯಂತ ಪುಷ್ಕಳವಾಗಿ ಬೆಳೆದುಬಂದಿರುವುದು ಕಾಣುತ್ತದೆ. ಅಲ್ಲದೆ ಪರಸ್ಪರ ಭಾಷೆಗಳಲ್ಲಿ ಅನುವಾದವೂ ಸಮೃದ್ಧವಾಗಿ ನಡೆದಿದೆ. ಕರ್ನಾಟಕದ ಗಡಿಯಲ್ಲಿರುವ ಆಂಧ್ರಪ್ರದೇಶಕ್ಕೆ ಸೇರಿದ ಕುಪ್ಪಂ ಪ್ರಾಂತವನ್ನು ಕಂಗುಂದಿ ಕುಪ್ಪಂ ಎಂದು ಕರೆಯುವುದು ವಾಡಿಕೆ. ಕಂಗುಂದಿ ಮನೆತನದ ಪಾಳೆಯಗಾರರು ಆಳಿರುವುದರಿಂದ ಅದಕ್ಕೆ ಕಂಗುಂದಿ ಕುಪ್ಪಂ ಎಂಬ ಹೆಸರು ಬಂದಿದೆ. ಈ ಕಂಗುಂದಿ ಎಂಬ ಊರಿಗೂ, ಅಲ್ಲಿರುವ ಬೆಟ್ಟ ಮತ್ತು ಕೋಟೆಯ ಬಗೆಗೂ ಹಲವಾರು ದಂತಕಥೆಗಳಿವೆ. ಈ ಕಂಗುಂದಿಯ ಪಾಳೇಯಗಾರರು ಬೇರೆ ಕಡೆಯಿಂದ ವಲಸೆ ಬಂದು ಇಲ್ಲಿನ ಗಿರಿಜನರೊಂದಿಗೆ ಹೊಂದಿಕೊಂಡು ತದನಂತರ ಆಳುವವರಾದರೆಂದು ಅದರ ಒಟ್ಟಾರೆ ಅಭಿಮತ. ಈ ಕಂಗುಂದಿಯ ಪಾಳೇಯಗಾರರು ಇಲ್ಲಿನ ಕಲೆಗಳಿಗೆ ಮಹೋನ್ನತವಾದ ಉತ್ತೇಜನವನ್ನು ನೀಡಿರುವುದು ಕಂಡುಬರುತ್ತದೆ.

ಮುಖ್ಯವಾಗಿ ಇಲ್ಲಿನ ನಾಟಕಗಳ ವಿಶೇಷವೆಂದರೆ ಮಹಾಭಾರತದ ಹದಿನೆಂಟು ಪರ್ವಗಳನ್ನು, ಹದಿನೆಂಟು ದಿವಸಗಳಲ್ಲಿ ಕ್ರಮವಾಗಿ ಅಭಿನಯಿಸಲಾಗುತ್ತದೆ. ಇದು ಇಡೀ ಭಾರತದಲ್ಲಿಯೇ ಅತ್ಯಂತ ವಿಶೇಷವಾದ ಕ್ರಮವಾಗಿದೆ. ಮಹಾಭಾರತದ ಬೇರೆ ಬೇರೆ ಘಟ್ಟಗಳನ್ನು ಬಿಡಿ ಬಿಡಿಯಾಗಿ ಅಭಿನಯಿಸುವ ಪದ್ಧತಿಯನ್ನು ಸಹಜವಾಗಿ ಕಂಡುಬರುತ್ತದೆ. ಆದರೆ ಕುಪ್ಪಂನ ಈ ನಾಟಕ ವಿಧಾನವನ್ನು 'ಭಾರತಂನಾಟಕಾಲು' ಎಂದೇ ಕರೆಯುತ್ತಾರೆ. ಕುಪ್ಪಂ ಮಂಡಲದ 'ಯಾಮಿಗಾನಿಪಲ್ಲಿ'ಯಲ್ಲಿ ಜರುಗುವ ಈ ನಾಟಕಗಳ ಉತ್ತವವು ವರ್ಷಕ್ಕೊಂದಾವರ್ತಿ ನಡೆಯುತ್ತದೆ. ತಲೆಮಾರಿನಿಂದ ತಲೆಮಾರಿಗೆ ನಡೆದು ಬರುತ್ತಿರುವ ಈ ಸಂಪ್ರದಾಯದಲ್ಲಿ ಕಲಾವಿದರೂ ಸಹ ಎಷ್ಟೋ ಜನ ಮರಣಿಸಿದರೂ ಅವರ ಮಕ್ಕಳೂ ಮೊಮ್ಮಕ್ಕಳೂ ಕಲಾವಿದರೂ ಸಹ ಎಷ್ಟೋ ಜನ ಮರಣಿಸಿದರೂ ಅವರ ಮಕ್ಕಳೂ ಮೊಮ್ಮಕ್ಕಳೂ ಅಥವಾ ಆಸಕ್ತರು ಪಾತ್ರಗಳನ್ನು ಅಭಿನಯಿಸುತ್ತಾ ಈ ನಾಟಕ ಸಂಪ್ರದಾಯವನ್ನು ಮುಂದುವರಿಸುತ್ತಿರುವುದನ್ನು ಕಾಣುತ್ತೇವೆ. ಮಹಾಭಾರತ ಯುದ್ಧಕ್ಕೆ ಆರಂಭವನ್ನು ಸಾರಿದಾಗಿನಿಂದ ಮೊದಲ್ಗೊಂಡು ಕೊನೆಯಾಗುವ ತನಕ ಈ ನಾಟಕ ಮಹೋತ್ಸವವು ಯಾಮಗಾನಿಪಲ್ಲಿಯಲ್ಲಿ ನಡೆಯುತ್ತದೆ. ಮೊದಲನೆ ದಿವಸ ಧ್ವಜಾರೋಹಣದಿಂದ ಪ್ರಾರಂಭವಾಗುವ ಈ ಉತ್ಸವವು ಕೊನೆಯ ದಿನ ಧರ್ಮರಾಜನಿಗೆ ಪಟ್ಟವನ್ನು ಕಟ್ಟುವುದರೊಂದಿಗೆ ಕೊನೆಯಾಗುತ್ತದೆ. ಹದಿನೆಂಟು ದಿನಗಳೂ ಹದಿನೆಂಟು ಪರ್ವಗಳ ನಾಟಕವನ್ನು ಅಭಿನಯಿಸಿ ಕೊನೆಯ ದಿನ 'ಇನಾಂ ಆಟ' ಎಂಬ ಹೆಸರಿನಲ್ಲಿ ಹೆಚ್ಚುವರಿಯಾಗಿ ಒಂದು ನಾಟಕವನ್ನು ಅಭಿನಯಿಸುತ್ತಾರೆ. ಒಟ್ಟು ಮಹಾಭಾರತದ ಅಂದರೆ ಪಾಂಡವರ ಜನನಕ್ಕಿಂತಲೂ ಪೂರ್ವದಿಂದ ಅವರ ವಂಶಾವಳಿಯ ಚರಿತ್ರೆಯನ್ನು ಹೇಳುವುದರಿಂದ ಈ ನಾಟಕ ಉತ್ಸವವು ನಡೆಯುತ್ತದೆ. ಚಂದ್ರವಂಶ ಚರಿತ್ರೆ ಎಂದು ಇದನ್ನು ಕರೆಯುವುದನ್ನು ಕಾಣುತ್ತೇವೆ. ಈ ಹದಿನೆಂಟು ದಿನಗಳು ನಡೆಯುವ ಹದಿನೆಂಟು ಪರ್ವಗಳ ಕಥಾಭಿತ್ತಿಯ ನಾಟಕೋತ್ಸವವನ್ನು ಈ ಲೇಖನದಲ್ಲಿ ಪರಿಶೀಲಿಸಲಾಗುವುದು.

**ವಿಷಯ ನಿರೂಪಣೆ**

ಜಾನಪದರ ಮನೋರಂಜನೆಯ ಮೂಲಗಳಲ್ಲಿ ಪ್ರಮುಖವಾದ ನಾಟಕವು ಬೀದಿನಾಟಕಗಳ ಮುಂದುವರಿದ ಭಾಗವೇ ಆಗಿದೆ. ಹಲವಾರು ಅವಸ್ಥಾಂತರಗಲನ್ನು ದಾಟಿ ಇಂದಿನ ರಂಗಸಜ್ಜಿಕೆಯ ನಾಟಕದ ಮಟ್ಟಿಗೆ ಬಂದು ನಿಂತಿದ್ದೇವೆ. ಹೆಚ್ಚಿನದಾಗಿ ಪೌರಾಣಿಕ ಸನ್ನಿವೇಶಗಳನ್ನು ಆಧರಿಸಿ ನಾಟಕಗಳನ್ನಾಡುವ ಪದ್ಧತಿ ಇಂದಿಗೂ ಹಳ್ಳಿಗಳಲ್ಲಿ ಹೆಚ್ಚು ಪ್ರಸಿದ್ಧವಾಗಿದೆ. ರಾಮಾಯಣ, ಮಹಾಭಾರತಗಳು ಹೆಚ್ಚಿನ ನಾಟಕಗಳ ಮೂಲವಾಗಿವೆ. ಈ ಕೃತಿಗಳ ಯಾವುದೋ ಒಂದು ಸಂದರ್ಭವನ್ನು ಆಯ್ದು ಇಡೀ ರಾತ್ರಿ ನಾಟಕವನ್ನು ಸಂಭ್ರಮಿಸುವುದು ಸಹಜವಾದ ವಾಡಿಕೆ. ಆದರೆ ಇಡೀ ಮಹಾಭಾರತದ ಹದಿನೆಂಟು ಪರ್ವಗಳನ್ನೂ ಹದಿನೆಂಟು ದಿನಗಳು ಹಗಲಿನಲ್ಲಿ ಹರಿಕಥೆ ಮಾಡಿ, ಅದೇ ಕಥೆಯನ್ನು ರಾತ್ರಿ ನಾಟಕದ ರೂಪದಲ್ಲಿ, ಪ್ರದರ್ಶಿಸುವ ವಿಶಿಷ್ಟ ಕಲೆ ಹರಿದು ಬಂದಿರುವುದು ಬಹುಶಃ ಇಡೀ ಭಾರತದಲ್ಲಿ ಆಂಧ್ರ ಪ್ರದೇಶದ ಚಿತ್ತೂರು ಜಿಲ್ಲೆಯ ಕುಪ್ಪಂನ ಬಳಿಯ ಯಾಮಿಗಾನಿಪಲ್ಲಿ ಮಾತ್ರ.

ಕುಂಗುಂದಿ ಕುಪ್ಪಂ ನಾಟಕಗಳೆಂದೇ ಪ್ರಸಿದ್ಧಿ ಹೊಂದಿದ ಈ ನಾಟಕಗಳನ್ನು ಆಟ ಎಂತಲೂ ಬೀದಿ ನಾಟಕಗಳೆಂತಲೂ, ಭಾಗವತಗಳೆಂತಲೂ ಕರೆಯುವುದು ರೂಢಿ.

ಈ ಹದಿನೆಂಟು ದಿನಗಳ ನಾಟಕಗಳು ಸಾಮಾನ್ಯವಾಗಿ ಇತರೆಡೆಗಲಲ್ಲಿ ಆಡುವ ಹಾಗೆ ಇರುವುದಿಲ್ಲ. ಇವುಗಳ ಆರಂಭಕ್ಕೆ ಮೊದಲು ಅನೇಕ ಸಂಪ್ರದಾಯಗಳನ್ನು ಪಾಲಿಸುತ್ತಾರೆ. ಈ ಸಂಪ್ರದಾಯಗಳು ಇಲ್ಲಿನ ನಾಟಕೋತ್ಸವಗಳನ್ನು ಇತರರಿಗಿಂತ ಭಿನ್ನವಾಗಿಸಿವೆ. ಮೊದಲಿಗೆ ಮಹಾಭಾರತ ಕುಕ್ಕುವ ಸ್ತಂಭವೇರುವುದೆಂದು ಕರೆಯುತ್ತಾರೆ. ಆ ಊರಿನಲ್ಲಿ ಪ್ರತೀ ವರ್ಷ ಈ ನಾಟಕವನ್ನಾಡುವ ಸ್ಥಳಕ್ಕೆ ಮಹಾಭಾರತದಿಬ್ಬ ಎಂದು ಕರೆಯುತ್ತಾರೆ. ಊರಿನ ಗುಡಿಯಿಂದ ಇಲ್ಲಿಗೆ ದ್ರೌಪದಿ, ಕೃಷ್ಣ, ಪೋತರಾಜ ಮತ್ತು ನಾಲ್ಕು ಜನ ಪಾಂಡವರ ಮೂರ್ತಿಗಳನ್ನು ಈ ದಿಬ್ಬಕ್ಕೆ ತರುತ್ತಾರೆ. ಧರ್ಮರಾಜನ ವಿಗ್ರಹವನ್ನು ತರುವುದಿಲ್ಲ. ಕಾರಣ ಆತ ತುಂಬಾ ಸತ್ಯವಂತನಾದ್ದರಿಂದ ಆತನಿಗೆ ಅಂಟುಮುಂಟು ಸೋಕಿದರೆ ಊರು, ರಾಜ್ಯ ನಾಶವಾಗುತ್ತದೆ ಎಂದು ಹೇಳಲಾಗುತ್ತದೆ. ಆದರೆ ಅದರ ಬದಲಿಗೆ ಒಂದು ಮಣ್ಣಿನ ಮಡಿಕೆಯನ್ನು ಧರ್ಮರಾಯನ ಹೆಸರಿನಲ್ಲಿ ಇಡಲಾಗುತ್ತದೆ. ಇದನ್ನು ಪೂಜಿಸಲು ಆ ಊರಿನ ಅಗಸ ಮತ್ತು ಒಬ್ಬ ಬೈರಾಗಿಯನ್ನು ನೇಮಿಸಲಾಗುತ್ತದೆ. ಅವರು ಆ ಗುಡಿಯ ಬಳಿಯಿರುವ ಹಳ್ಳ ಅಥವಾ ಬಾವಿಯಲ್ಲಿ ಸ್ನಾನ ಮಾಡಿ ಬಂದು ಅರಿಶಿಣದ ಬಟ್ಟೆಗಳನ್ನು ಉಟ್ಟು ಶುದ್ಧವಾಗಿ ಪೂಜಾರಿಗಳಂತೆ ಆ ವಿಗ್ರಹಗಳನ್ನು ಪೂಜಿಸುತ್ತಾರೆ. ಇದನ್ನು ಗಮನಿಸಿದರೆ ಈ ರೀತಿಯ ಆಚರಣೆಗಳು ವೈದಿಕರ ಪ್ರವೇಶವಿಲ್ಲದೆ ನಡೆಯುತ್ತಿದ್ದವು ಎಂದು ತೋರುತ್ತದೆ ಮತ್ತು ನೀರಿನ ಮೂಲಗಳಾದ ನದಿ, ಹಳ್ಳ, ತೊರೆ, ಬಾವಿ ಇಂತಹವುಗಳ ದಡಗಳಲ್ಲಿ ನಡೆಯುವುದು ಸಾಮಾನ್ಯವಾಗಿದೆ. ಬಳ್ಳಾರಿ ಜಿಲ್ಲೆಯ ಮೈಲಾರಲಿಂಗನ ಪೂಜಾ ಮಹೋತ್ಸವವೂ ಇದೇ ರೀತಿ ತುಂಗಾನದಿಯ ದಡದಿಂದ ಮಣ್ಣನ್ನು, ನೀರನ್ನು ತಂದು ಪೂಜಿಸುವ ಮೂಲಕ ಶುರುವಾಗುತ್ತದೆ.

ಕುಪ್ಪಂನ ಪದ್ಧತಿಯಲ್ಲಿ ಬೈರಾಗಿಯನ್ನು ಪೂಜೆಗೆ ಆಹ್ವಾನಿಸುವುದು ಸಹಜವೇ ಎನಿಸಿದರೂ, ಊರಿನ ಮೈಲಿಗೆಯನ್ನು ತೊಳೆಯುವ ಅಗಸನನ್ನು ಪೂಜಾರಿಯಂತೆ ನೇಮಿಸುವುದು ವಿಶೇಷವೆನಿಸುತ್ತದೆ. ಇದರ ಮೂಲ ಉದ್ದೇಶವೇನು, ಇದು ಎಲ್ಲಿಂದ ಆರಂಭವಾಯಿತು ಎಂಬುದರ ಬಗ್ಗೆ ಸ್ಪಷ್ಟ ಉತ್ತರವಿಲ್ಲ. ಇಂದಿಗೂ ದೇವರ ಉತ್ಸವಗಳಲ್ಲಿ ನಡೆಮಡಿಯನ್ನು ಹಾಸುವ ಮತ್ತು ಪಂಜನ್ನು ಹಿಡಿಯುವ ಕಾಯಕವನ್ನು ಈ ಅಗಸ ಸಮುದಾಯದವರು ಮಾಡುತ್ತಾರೆ. ಮೈಲಾರಲಿಂಗನ ಚರಿತ್ರೆಯಲ್ಲಿ ರಾತ್ರಿ ಕಾಳಗ ನಡೆಯುವ ಸಂದರ್ಭದಲ್ಲಿ ಪಂಜುಗಳನ್ನು ಹಿಡಿಯುತ್ತಿದ್ದ ಜನರಿದ್ದರು. ಅದರ ಸಂಕೇತವಾಗಿ ಇಂದಿಗೂ ಆ ದೇವರ ಉತ್ಸವದಲ್ಲಿ ಪಂಜನ್ನು ಹಿಡಿಯುವ ಪದ್ಧತಿಯಿದೆ. ಇದು ಕ್ರಮೇಣ ಇತರ ಕಡೆಗಳಿಗೆ ರವಾನೆಯಾಯಿತೆ ಎನ್ನುವ ಅನುಮಾನವಿದೆ. ಕುಪ್ಪಂನ ಈ ಮಹಾಭಾರತ ನಾಟಕಗಳನ್ನು ಆಡುವವರು ತಮ್ಮ ಮೂಲ ಪುರುಷರು ಮಹಾರಾಷ್ಟ್ರದ ಪುಣೆ ಬಳಿಯ ಒಂದು ಹಳ್ಳಿಯಿಂದ ಇತ್ತ ಕಡೆ ವಲಸೆ ಬಂದವರೆಂದು ಹೇಳಿಕೊಳ್ಳುತ್ತಾರೆ. ಇದೇ ಮಹಾರಾಷ್ಟ್ರದಲ್ಲಿ ಮೈಲಾರಲಿಂಗನನ್ನು ಖಂಡೇರಾಯ ಎಂದು ಪೂಜಿಸುವ ಪದ್ಧತಿ ಇಂದಿಗೂ ನಡೆಯುತ್ತದೆ. ಈ ಎರಡೂ ಪೂಜಾವಿಧಾನಗಳ ಮತ್ತು ಸಮುದಾಯಗಳ ನಡುವೆ ಏನಾದರೂ ಸಂಬಂಧವಿತ್ತೆ ಎನ್ನುವುದನ್ನು ಹುಡುಕಬೇಕಾಗಿದೆ.

ಇನ್ನು ಎರಡನೆ ದಿವಸ ಮಣ್ಣಿನ ಮಡಿಕೆ ಅಥವಾ ಕೊಡ ಎಂದು ಕರೆಯುವ ವಸ್ತುವನ್ನು ಕಲಶ ಎನ್ನುವ ಹೆಸರಿನಲ್ಲಿ ಪ್ರತಿಷ್ಠಾಪಿಸುವ ಕಾರ್ಯ. ಇಲ್ಲಿಯೂ ಸಹ ಊರಿನ ಸಾಮಾನ್ಯರಾದ ನಾಲ್ಕು ಜನ ಬ್ರಹ್ಮಚಾರಿಗಳನ್ನು ಕರೆತಂದು ಪೋತರಾಜು ಮುಂತಾದ ವಿಗ್ರಹಗಳನ್ನು ಹೊತ್ತುಕೊಂಡು ಮಂಗಳ ವಾದ್ಯಗಳೊಂದಿಗೆ ಗುಡಿಯ ಬಳಿಯ ಹಳ್ಳ ಅಥವಾ ಬಾವಿಯ ಬಳಿಗೆ ಬಂದು ಅವರಿಗೆ ಸ್ನಾನ ಮಾಡಿಸಿ ಆ ಮಣ್ಣಿನ ಕೊಡವನ್ನು ಅವರ ಕೈಗೆ ಕೊಟ್ಟು, ಯಾರ ಮೈಮೇಲೆ ದೇವರು ಬರುತ್ತಾನೋ ಅವರು ಹೋಗಿ ಈ ಕೊಡದಲ್ಲಿ ನೀರು ತರಬೇಕೆಂದು ಹೇಳುತ್ತಾರೆ. ಮಂಗಳ ವಾದ್ಯಗಳ ಸದ್ದಿಗೆ ಯಾಕೋ ಒಬ್ಬರು ಮೈಯ್ಯಲ್ಲಾಡುತ್ತಾ ಹೋಗಿ ಆ ಕೊಡದಲ್ಲಿ ನೀರುತ್ತಾರೆ. ಅದನ್ನು ಹಿಂತಿರುಗಿ ಒಯ್ದು ತರುವಾಗ ಮುಂದೆ ಬ್ರಾಹ್ಮಣರು ವೇದಮಂತ್ರಗಳನ್ನು ಹೇಳುತ್ತಾರೆ ಎನ್ನುವುದಿದೆ. ಇಲ್ಲಿಂದ ಅದು ಹೇಗೆ ಮತ್ತು ಯಾವಾಗ ಬ್ರಾಹ್ಮಣರು ಬಂದು ಸೇರಿಕೊಂಡರೋ ತಿಳಿಯದು. ಆ ಕೊಡವನ್ನು ವಿಗ್ರಹಗಳ ಪಕ್ಕದಲ್ಲಿಯೇ ಇಟ್ಟು, ಒಂದು ಖತ್ತಿಯನ್ನು ಆ ಕೊಡದ ಕಂಠದ ಕೆಳಗೆ ಆನಿಸಿ ನಿಲ್ಲಿಸುತ್ತಾರೆ. ಆ ಖಡ್ಗವು ಹಾಗೆಯೇ ನಿಂತರೆ ಆ ವರ್ಷ ಮಹಾಭಾರತ ನಾಟಕೋತ್ಸವವನ್ನು ಮಾಡುವುದಾಗಿಯೂ ಅದು ನಿಲ್ಲದೆ ಹೋದರೆ ಆ ವರ್ಷ ಸೂತಕವೆಂದು ನಾಟಕಗಳನ್ನು ಆಡಬಾರದೆಂತಲೂ ನಂಬುತ್ತಾರೆ. ಹೀಗೆ ನಿಲ್ಲಿಸಿದ ಖತ್ತಿಯನ್ನು ಸ್ವಲ್ಪ ಹೊತ್ತಿನ ನಂತರ ತೆಗೆದು ಅದರ ಕಂಠದಲ್ಲಿ ವೀಳೆಯದೆಲೆ ಮತ್ತು ತೆಂಗಿನಕಾಯನ್ನು ಇಟ್ಟು, ಅದರ ಮುಂದೆ ಯಜ್ಞಕುಂಡವನ್ನು ಸ್ಥಾಪಿಸಿ ಯಜ್ಞಕಾರ್ಯವನ್ನು ನೆರವೇರಿಸುತ್ತಾರೆ. ದ್ರೌಪದಿಯು ಯಜ್ಞಕುಂಡದಿಂದ ಜನಿಸಿದವಳಾದ್ದರಿಂದ ಆಕೆಯೇ ಮಹಾಭಾರತ ನಡೆಯಲು ಕಾರಣಳಾದ್ದರಿಂದ ಈ ನಾಟಕಗಳು ನಡೆಯುವ ಹದಿನೆಂಟು ದಿವಸವೂ ಯಜ್ಞಕುಂಡದಲ್ಲಿ ಬೆಂಕಿ ಉರಿಯುತ್ತಲೇ ಇರಬೇಕೆಂದು ಹೇಳುತ್ತಾರೆ. ಇಂದಿಗೂ ತಿಗಳ ಜನಾಂಗವು ಆಚರಿಸುವ ಕರಗ ಮಹೋತ್ಸವದಲ್ಲಿ ದ್ರೌಪದಿಯನ್ನು ಆಹ್ವಾನಿಸಲು ಬಳಸುವುದು ಮಣ್ಣಿನ ಮಡಿಕೆಯನ್ನೇ. ಈ ಮಡಿಕೆಯ ಮೇಲೆಯೇ ಹೂವಿನ ಕರಗವನ್ನು ಕಟ್ಟುವ ಸಂಪ್ರದಾಯವನ್ನು ನೋಡುತ್ತೇವೆ. ಮೈಲಾರಲಿಂಗನ ಪೂಜೆಯ ಸಂದರ್ಭದಲ್ಲಿ ಗಂಗಮಾಳಮ್ಮನನ್ನೂ, ಮಹಾಭಾರತದ ನಾಟಕೋತ್ಸವ ಪೂಜೆಯ ಸಂದರ್ಭದಲ್ಲಿ ಮತ್ತು ಕರಗ ಮಹೋತ್ಸವದ ಸಂದರ್ಭದಲ್ಲಿ ದ್ರೌಪದಿಯನ್ನು ನೆನೆಯುವುದು ವಾಡಿಕೆ. ಈ ಯಜ್ಞಕುಂಡ ಸ್ಥಾಪನೆಯ ಬಗೆಗೆ ವಿವರಿಸುವಾಗ ದ್ರೌಪದಿಯು ಐದು ಜನರನ್ನು ಮದುವೆಯಾದ ಬಗೆಗೆ ಹೇಳುತ್ತಾ ಅಂದು ಸಂಪ್ರದಾಯವಾಗಿದ್ದ ಮಾತೃಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿ ಇದು ಸಾಮಾನ್ಯವಾಗಿದ್ದ ಸಂಗತಿ ಎಂದು ವಿವರಿಸುತ್ತಿರುವ ಇಲ್ಲಿನ ಆಶಯವು ಈ ಆಚರಣೆಗಳ ಪ್ರಾಚೀನತೆಯನ್ನು ಹೇಳುವಂತಿದೆ. ಈ ಎರಡೂ ಸಂದರ್ಭಗಳಲ್ಲಿ ಮಣ್ಣಿನ ಮಡಿಕೆ ಮತ್ತು ಬೆಂಕಿಯ ಪ್ರಸ್ತಾಪಗಳು ಬರುತ್ತವೆ.

ಎರಡೂ ಸಂದರ್ಭಗಳಲ್ಲಿಯೂ ಯುದ್ಧದ ಕುರುಹುಗಳು ಮತ್ತು ನಿಲುವುಗಳು ಕಂಡುಬರುತ್ತವೆ. ಒಂದು ವೇಳೆ ಬೆಂಕಿಯ ಮತ್ತು ಚಕ್ರದ ಆವಿಷ್ಕಾರಗಳಾದ ನಂತರ ಇವೆರಡರ ಒಡೆತನಕ್ಕಾಗಿ ಯುದ್ಧಗಳು ಜರುಗಿರಬಹುದೇ? ಯಜ್ಞಕುಂಡ ಎಂದು ಕರೆಯುವಲ್ಲಿಯೂ ಕುಂಡ ಅಂದರೆ ಮಡಿಕೆಯ ಪ್ರಸ್ತಾಪವೇ ಕಾಣುತ್ತದೆ. ಮಡಿಕೆಯಲ್ಲಿ ಬೆಂಕಿಯನ್ನು ಸಂರಕ್ಷಿಸಿಕೊಳ್ಳುವ ಉಪಾಯದ ಪ್ರತೀಕವೇ ಇದಾಗಿರಬಹುದೆ? ಈ ಮಹಾಭಾರತ ನಾಟಕೋತ್ಸವದಲ್ಲಿ ಬರುವ ಅರ್ಜುನ ತಪಸ್ಸು ಮರವನ್ನು ಏರುವ ಸಂದರ್ಭವೂ ಮೈಲಾರಲಿಂಗ ಒಂದು ಮರದ ಉದ್ದದ ಬಿಲ್ಲನ್ನು ಏರಿ ಕಾರಣೀಕ ನುಡಿಯುವುದು ಎರಡೂ ಸನ್ನಿವೇಶಗಳು ಶತ್ರುಗಳ ಯುದ್ಧತಂತ್ರಗಳನ್ನು ಅರಿಯಲು ಎತ್ತರವಾದ ಸ್ಥಳವನ್ನು ಏರಿ ಗಮನಿಸಿ ತಮ್ಮವರಿಗೆ ಜಾಗ್ರತೆಯನ್ನು ನೀಡುವ ಕುರುಹುಗಳಾಗಿ ಕಾಣುವಂತಿವೆ.

ಇಲ್ಲಿ ಕುಪ್ಪಂ ನಾಟಕಗಳಲ್ಲಿ ಈ ಯಜ್ಞಕುಂಡದ ಕಾರ್ಯವೂ ಮುಗಿದ ಮೇಲೆ ಐದು ಜನ ಬ್ರಹ್ಮಚಾರಿಗಳ ಮುಂದಾಳತ್ವದಲ್ಲಿ ಬಾಳೆಯ ಕಂಬಗಳು ಹಾಲ (ಅಮೃತಶಿಲೆಯ) ಕಂಬಗಳು ಮತ್ತು ಬಿಲ್ವಪತ್ರೆಗಳಿಂದ ಮಾಡಿದ ಗುಡಿಯ ಮಧ್ಯದಲ್ಲಿ ಅಕ್ಕಿಯನ್ನು ಹಾಕಿ ಅದರಲ್ಲಿ ಆ ಕಳಶವನ್ನು ಪ್ರತಿಷ್ಠೆ ಮಾಡಿ ಅದಕ್ಕೆ ಬಿಳಿಯ ಬಟ್ಟೆಯನ್ನು ಹೊದಿಸಲಾಗುತ್ತದೆ. ಅಲ್ಲಿಯೇ ಒಂದು ಕಡೆ ತೋಡಿರುವ ಗುಂಡಿಯಲ್ಲಿ ನವಧಾನ್ಯಗಳು, ನಾಣ್ಯಗಳನ್ನು ಹಾಕಿ, ಒಂದು ಉದ್ದನೆಯ ಬಿದಿರು ಗಳಕ್ಕೆ ಕೊನೆಯಲ್ಲಿ ಮೂರು ಬಿದಿರು ದಬ್ಬೆಗಳನ್ನು ಕಟ್ಟಿ ಅದಕ್ಕೆ ಒಂದು ಕೆಂಪನೆಯ ಬಟ್ಟೆಯನ್ನು ಸುತ್ತಿ ಈ ನವಧಾನ್ಯಗಳು ತುಂಬಿದ ಗುಂಡಿಯಲ್ಲಿ ಹೂಳುವರು. ಇದೇ ಕುಕ್ಕುಟ ಸ್ತಂಭ. ಮಹಾಭಾರತದ ನಾಟಕಗಳ ಆದಿಗೆ ಧ್ವಜಾರೋಹಣ. ಇದನ್ನು ಕುಕ್ಕುಟ ಸ್ತಂಭವೆಂದು ಕರೆಯಲು ಕಾರಣವೇನೆಂದು ತಿಳಿಯದು. ಇದಾದ ಮೂರನೇ ದಿನಕ್ಕೆ ನಾಟಕಗಳು ಪ್ರಾರಂಭವಾಗುತ್ತವೆ. ಮೈಲಾರಲಿಂಗನ ಸಂಪ್ರದಾಯದಲ್ಲಿಯೂ ಕಾರಣೀಕ ನುಡಿಯುವ ಗೊರವಪ್ಪ ಊರ ಹೊರಗೆ ಒಂದು ಸ್ಥಳದಲ್ಲಿ ಶುದ್ಧನಾಗಿ ಕಾರಣೀಕ ನುಡಿಯುವುದಕ್ಕೂ ಮೊದಲು ಹಲವು ದಿನ ಬಿಲ್ಲನ್ನು ಪೂಜಿಸುತ್ತಾರೆ. ಇದೂ ಸಹ ಎರಡೂ ಸಂಪ್ರದಾಯಗಳಲ್ಲಿರುವ ಸಾಮ್ಯತೆಯಾಗಿದೆ.

ಅಲ್ಲದೆ ಇಲ್ಲಿನ ಇನ್ನೊಂದು ವೈವಿಧ್ಯತೆಯ ಪಾತ್ರವೆಂದರೆ ಪೋತರಾಜುವಿನದು. ಮೂಲತಃ ಮಹಾಭಾರತಕ್ಕೂ ಈತನಿಗೂ ಸಂಬಂಧವಿಲ್ಲದಿದ್ದರೂ ಜಾನಪದರು ಹೆಣೆದ ಒಂದು ಕಥೆಯಿದು. ಹಿಂದೆ ದಂಡಕಾರಣ್ಯದಲ್ಲಿದ್ದ ಅಪ್ಪಟ ಶಿವಭಕ್ತ ಅರಸನಾದ 'ಗುರುಲಿಂಗ ಮಹಾರಾಜ'ನ ಮಗನೇ ಈ ಪೋತರಾಜು. ಕುಳ್ಳಗಿನ ಶರೀರದ ಈತ ತಂದೆಯ ರಥದಲ್ಲಿ ಅವನಿಗೆ ತಿಳಿಯದೆ ಕೈಲಾಸಕ್ಕೆ ಹೋಗಿ ಇಲ್ಲಿನ ವೀರಭದ್ರನ ವೀರ ಚಾಟಿ ಮತ್ತು ಖಡ್ಗವನ್ನು ತಂದು ಅದರಿಂದ ವನವಾಸದಲ್ಲಿದ್ದ ಭೀಮನನ್ನು ಸೋಲಿಸಿ ಬೆನ್ನಟ್ಟಿದಾಗ ಶ್ರೀಕೃಷ್ಣ ಉಪಾಯದಿಂದ ತಾನು ಮುದುಕಿಯಾಗಿ, ಅರ್ಜುನನನ್ನು ಪ್ರಾಯದ ಹೆಣ್ಣಾಗಿ, ವೇಷ ಹಾಕಿ ಆ ಪೋತರಾಜುನನ್ನು ಮನಸೋಲುವಂತೆ ಮಾಡುತ್ತಾನೆ. ಆಕೆಯನ್ನು ಮುದುವೆಯಾಗಲು ನಿನ್ನ ತಂದೆಯ, ತಲೆಯನ್ನು ಕತ್ತರಿಸಿ ತರಬೇಕೆಂದು ಹೇಳುತ್ತಾನೆ. ಮುದುಕಿ ರೂಪದ ಶ್ರೀಕೃಷ್ಣ ಗುರುಲಿಂಗ ಮಹಾರಾಜನ ತಲೆಯನ್ನು ಯಾರಾದರೂ ಕಡಿದರೆ ಆ ತಲೆ ನೆಲಕ್ಕೆ ಬಿದ್ದರೆ ಕಡಿದವರ ತಲೆ ಸಹಸ್ರ ಹೋಳಾಗುತ್ತದೆಂದು ಪರಮೇಶ್ವರನ ವರವಿರುತ್ತದೆ. ಆದ್ದರಿಂದಲೇ ಆ ಪೋತರಾಜು ಇಂದಿಗೂ ತನ್ನ ತಂದೆಯ ತಲೆಯನ್ನು ಕೈಯಲ್ಲಿ ಹಿಡಿದುಕೊಂಡೇ ಇದ್ದಾನೆಂದು ಅವರ ಮೂರ್ತಿಯನ್ನು ಹಾಗೆಯೇ ರೂಪಿಸುತ್ತಾರೆ ಮತ್ತು ಮಹಾಭಾರತದ ನಾಟಕಗಳನ್ನು ಆಡುವ ರಂಗಸಜ್ಜಿಕೆಯ ಪಕ್ಕದಲ್ಲಿಯೇ ಅದನ್ನು ಪ್ರತಿಷ್ಠಾಪಿಸಿ ಮೊದಲ ಪೂಜೆಯನ್ನು ಆತನಿಗೆ ನೀಡುತ್ತಾರೆ. ಏಕೆಂದರೆ ತನ್ನ ತಂದೆಯ ತಲೆ ಕಡಿದ ನಂತರ ಕೃಷ್ಣನ ವಂಚನೆಯ ಅರಿವಾಗಿ ಅದನ್ನು ಪ್ರಶ್ನಿಸಿದಾಗ, ನೀನು ಪಾಂಡವರಿಗೆ ಕಾರ್ಯದರ್ಶಿಯಾಗಿರು, ಅವರಿಗೆ ಸಲ್ಲುವ ಪೂಜೆಗಳಲ್ಲಿ ಅಗ್ರಪೂಜೆ ನಿನಗೇ ಸೇರಲಿ ಎಂದು ವರವನ್ನೀಯುತ್ತಾನೆ. ಅಲ್ಲದೆ ಒಮ್ಮೆ ಪಾಂಡುರಾಜ ಮಾದ್ರಿಯನ್ನು ಕೂಡಿದಾಗ ಆತನ ವೀರ್ಯ ಕೆಳಗೆ ಬಿದ್ದಾಗ ವೇದವ್ಯಾಸರು ಅದನ್ನು ಒಂದು ಶಂಖದಲ್ಲಿ ಸಂರಕ್ಷಿಸಿದರಂತೆ. ಅದರಿಂದ ಹುಟ್ಟಿದ ಹೆಣ್ಣು ಶಂಬಾದೇವಿ. ಈಕೆಯನ್ನು ಕೃಷ್ಣ ಆ ಪೋತರಾಜನಿಗೆ ಕೊಟ್ಟು ಮದುವೆ ಮಾಡುತ್ತಾನೆ. ಇದರಿಂದ ಪಾಂಡವರ ಮತ್ತು ಪೋತರಾಜುವಿನ ಸಂಬಂಧವೂ ಗಟ್ಟಿಗೊಳ್ಳುತ್ತದೆ. ಆದಕಾರಣ ಮಹಾಭಾರತ ಉತ್ಸವಗಳಲ್ಲಿ ಪೋತರಾಜುವಿನ ಮೂರ್ತಿಗೇ ಮೊದಲ ಪೂಜೆ ಸಲ್ಲುತ್ತದೆ.

ಇದಲ್ಲದೆ ದುರ್ಯೋಧನನು ಭೀಮನಿಂದ ವಧಿಸಲ್ಪಡುತ್ತಾನೆಂಬುದು ನಮಗೆ ತಿಳಿದಿರುವ ವಿಷಯವೇ. ಮಹಾಭಾರತದ ದಿಬ್ಬದಲ್ಲಿ ಬಂಡಿಗಟ್ಟಲೆ ಮಣ್ಣನ್ನು ಸುರಿದು ಅಜಾನುಬಾಹು ದುರ್ಯೋಧನನ ಮೂರ್ತಿಯನ್ನು ನಿರ್ಮಿಸಲಾಗಿರುತ್ತದೆ. ಇದರ ಮೇಲೆ ಭೀನ ದುರ್ಯೋಧನರ ಯುದ್ಧ ಜರುಗುತ್ತದೆ. ಯುದ್ಧ ಜರುಗಿ ದುರ್ಯೋಧನನನ್ನು ವಧಿಸಿ, ಆ ನಟರೆಲ್ಲಾ ಅತ್ತ ಹೋದ ಕೂಡಲೇ ಇತ್ತ ಜನರೆಲ್ಲಾ ಆ ಮೂರ್ತಿಯ ಮಣ್ಣಿಗಾಗಿ ಮುಗಿ ಬೀಳುತ್ತಾರೆ. ಆ ದುರ್ಯೋಧನ ಮೂರ್ತಿಯ ಮಣ್ಣನ್ನು ಒಂದು ಹಿಡಿ ತಮ್ಮ ಮನೆಯಲ್ಲಿ ಇಟ್ಟುಕೊಂಡರೆ ಎಲ್ಲಾ ಶುಭವೇ ನಡೆಯುತ್ತದೆ, ಪಶು ಸಂಪತ್ತು, ಧನ ಧಾನ್ಯ ಸಂಪತ್ತೆಲ್ಲವೂ ಹೇರಳವಾಗಿ ಹೆಚ್ಚುತ್ತದೆಂಬುದು ಜನರ ನಂಬಿಕೆ. ಮೇಲ್ನೋಟಕ್ಕೆ ದುರಹಂಕಾರಿಯಾಗಿ, ಚಿಕ್ಕಪ್ಪನ ಮಕ್ಕಳಿಗೆ ಆಸ್ತಿ ಕೊಡದ ಮೋಸಗಾರನಾಗಿ ಅತಿಲೋಭದಿಂದ ಬದುಕಿ ಕೊನೆಗೆ ಭೀಮನ ಕೈಯಲ್ಲಿ ನೀಚಾತಿ ನೀಚವಾಗಿ ಪ್ರಾಣಬಿಟ್ಟ ದುರ್ಯೋಧನ. ಆದರೆ ಆತನು ಸತ್ತ ನಂತರ ಆತನ ಶರೀರದ ಭಾಗವೆಂದು ಭಾವಿಸುವ ಮಣ್ಣು ಶುಭಸಂಕೇತವಾಗುತ್ತದೆ ಹೇಗೆ? ಅದೇ ಜನಪದರ ವೈಶಿಷ್ಟ್ಯ, ಒಳ್ಳೆಯದರಲ್ಲಿ ಕೆಟ್ಟದ್ದನ್ನು ಹುಡುಕಿದವರಲ್ಲ ಜನಪದರು, ಕೆಟ್ಟದ್ದರಲ್ಲಿ ಒಳ್ಳೆಯದನ್ನು ಹುಡುಕಿದವರು. ದುರ್ಯೋಧನನನ್ನು ಹೀಗೆ ಪೂಜಿಸುವ ಸಂಪ್ರದಾಯವು ಆತನ ಔದಾರ್ಯತೆಗೆ ಹಿಡಿದ ಕನ್ನಡಿ.

**ಉಪಸಂಹಾರ**

ಮಹಾರಾಷ್ಟ್ರದ ಪುಣೆಯ ಬಳಿಯಿಂದ ಯಾವುದೋ ಕಾಲದಲ್ಲಿ ಬಂದು ಇಲ್ಲಿ ನೆಲೆಸಿ, ಮಹಾಭಾರತದ ಹದಿನೆಂಟು ಪರ್ವಗಳ ಕಥೆಗೆ ನಾಂದಿ ಹಾಡಿರುವ ಹಾಗೂ ಅಂದಿನಿಂದ ಇಂದಿನವರೆಗೂ ಅದನ್ನು ಮುನ್ನಡೆಸಿಕೊಂಡು ಬರುತ್ತಿರುವ ಈ ಪದ್ಧತಿ

ಭಾರತದಲ್ಲಿಯೇ ವಿರಳಾತಿ ವಿರಳ. ಇಲ್ಲಿನ ಆಚರಣೆಗಳು ಮಾತೃ ಪ್ರಧಾನ ಕುಟುಂಬ ವ್ಯವಸ್ಥೆ, ದ್ರಾವಿಡರ ಪೂಜಾವಿಧಾನಗಳು ಮುಂತಾದವನ್ನು ವಿವರಿಸಲು ಯತ್ನಿಸುತ್ತಿರುವಂತಿವೆ. ಮೈಲಾರಲಿಂಗನ ಸಂಪ್ರದಾಯಕ್ಕೆ ಹತ್ತಿರವಿರುವ ಅನೇಕ ಪದ್ಧತಿಗಳನ್ನು ಇಲ್ಲಿ ಕಾಣುತ್ತೇವೆ. ಅರ್ಜುನ ತಪಸ್ಸಿನ ಮರವನ್ನು ಹತ್ತುವ ಪ್ರಕ್ರಿಯೆಯು ತಮಿಳುನಾಡಿನಲ್ಲಿಯೂ ಇಂದಿಗೂ ಅನೇಕ ದೇವಾಲಯಗಳಲ್ಲಿ ಕಂಡುಬರುತ್ತದೆ. ಅಂದರೆ ದಕ್ಷಿಣ ಭಾರತದ ಈ ವಿಶಿಷ್ಟ ಸಂಪ್ರದಾಯಗಳನ್ನು ಇನ್ನೂ ಹುಡುಕಿ ನೋಡುವ ಅಗತ್ಯವಿದೆ. ಸದ್ಯಕ್ಕೆ ಕಂಗುಂದಿ ಕುಪ್ಪಂನ ಈ ನಾಟಕಾರಂಭದ ವೈಶಿಷ್ಟ್ಯ, ಅದು ನಡೆಯುವ ರೀತಿ, ಕೊನೆಗೊಳ್ಳುವ ರೀತಿ, ದುರ್ಯೋಧನನ ಬಗೆಗೆ ಅಲ್ಲಿನ ಜನರ ಪ್ರೀತಿ ಇವೆಲ್ಲವೂ ವಿಶಿಷ್ಟ ಚಿಂತನೆಯೆಡೆಗೆ ನಮ್ಮನ್ನು ಕೊಂಡೊಯ್ಯುತ್ತವೆ.

**ಪರಾಮರ್ಶನ ಗ್ರಂಥಗಳು**


1. ಕಂಗುಂದಿ ಕುಪ್ಪಂನ ಬೀದಿ ನಾಟಕಗಳು ಶಾಸ್ತ್ರಾನುಶೀಲತೆ, ತೆಲುಗು ಮೂಲ–ಡಾ. ಆರ್. ವಾಸುದೇವ ಸಿಂಗ್, ಕನ್ನಡಕ್ಕೆ–ಡಾ. ಅರ್ಕಸಾಲಿ ವೃಷಭೇಂದ್ರಾಚಾರ್, ಮೊದಲ ಮುದ್ರಣ–2011, ಪ್ರಸಾರಾಂಗ, ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ
2. ಬಣ್ಣದ ಬದುಕು, ತೆಲುಗು ಮೂಲ–ಡಾ. ವಿ.ಆರ್. ರಾಸಾನಿ, ಕನ್ನಡಕ್ಕೆ–ಡಾ. ಓ.ಡಿ. ರಾಜಣ್ಣ ತಗ್ಗಿ, ಮೊದಲ ಮುದ್ರಣ–2010, ಪ್ರಸಾರಾಂಗ, ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ
3. ಕುವೆಂಪು ನಾಟಕಗಳ ಅಧ್ಯಯನ, ನರಹಳ್ಳಿ ಬಾಲಸುಬ್ರಹ್ಮಣ್ಯ, ಮೊದಲ ಮುದ್ರಣ–2016, ಅಂಕಿತ ಪುಸ್ತಕ, ಬೆಂಗಳೂರು
4. ಜಾನಪದ ವಿಜ್ಞಾನಾಧ್ಯಯನಂ, ಮೋಹನ್ ಜಿ.ಎಸ್., ಶ್ರೀನಿವಾಸ ಪಬ್ಲಿಕೇಷನ್, ಬೆಂಗಳೂರು, 2001
5. ಆಂಧ್ರುಲ ಜಾನಪದ ವಿಜ್ಞಾನಂ, ಸುಂದರಂ ಆರ್ವಿಯಸ್, ತೆಲುಗು ವಿಶ್ವವಿದ್ಯಾಲಯ, ಹೈದರಾಬಾದ್, 1992


**Citation:** Dr. MUNIRAJA. A. 2025. "ಕಂಗುಂದಿ ಕುಪ್ಪಂ ನಾಟಕಗಳು : ಮಹಾಭಾರತ ಕಥೆ". International Journal of Academic Research, 12(1): 86-89.
**Copyright:** ©2025 Dr. MUNIRAJA. A. This is an open-access article distributed under the terms of the Creative Commons Attribution License (https://creativecommons.org/licenses/by/4.0/), which permits unrestricted use, distribution, and reproduction in any medium, provided the original author and source are credited.